**Com.O.S.** 153/2024
**DW**–1

**ಸಾಕ್ಷಿಯನ್ನು ದಿನಾಂಕ 3.3.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ಈ ಕೆಳಗಿನ ದಾಖಲೆಗಳನ್ನು ಗುರುತಿಸಿದೆ

| | | |
|---|---|---|
| ExD1 | – | Power of attorney |
| ExD2 | – | Digital copy of screen shots of GPS dt. 9.5.2023 |
| ExP3 | – | Digital copy of report dt. 9.5.2023 |
| ExP4 | – | Digital copy of G–mail summaries |
| ExP5 | – | Tax assessment report |
| ExP6 | – | Ledger account statement |
| ExP7 | | Certificate u/s 63 of BNS |

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಸಿ ವಕೀಲರಿಂದಃ**

ನನ್ನ ತಾಯಿ ಮತ್ತು ಸಹೋದರ ಪ್ರತಿವಾದಿ ಸಂಸ್ಥೆಯ ಪಾಲುದಾರರಿದ್ದಾರೆ. ಪಾಲುದಾರಿಕೆ ಪತ್ರ ನೋಂದಣಿಯಾಗಿಲ್ಲ. ಪಾಲುದಾರಿಕೆ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಸಹೋದರ ನನಗಿಂತ ಕಿರಿಯವನಿರುತ್ತಾನೆ. ನನ್ನ ಸಹೋದರನಿಗೆ ಸಂಸ್ಥೆಯ ಎಲ್ಲ ವ್ಯವಹಾರ ಗೊತ್ತಿದೆ ಎಂದರೆ ನಿಜ. ನನ್ನ ಸಹೋದರ ಯಾವಾಗಲೂ ಚೆನ್ನೈನಲ್ಲಿರುವ ಕಾರಣ ಮತ್ತು ನಾನೇ ಪ್ರತಿವಾದಿಯ ಸಂಸ್ಥೆಯ

ವ್ಯವಹಾರವನ್ನು ನೋಡಿಕೊಳ್ಳುವ ಕಾರಣ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ. ಪ್ರತಿವಾದ ಪತ್ರಕ್ಕೆ ನನ್ನ ತಾಯಿ ಸಹಿ ಮಾಡಿದ್ದಾರೆ. ಪ್ರತಿವಾದ ಪತ್ರದಲ್ಲಿ ಪ್ರತಿವಾದಿ ಸಂಸ್ಥೆಯ ಸೀಲ್ ಇಲ್ಲ ಎಂದರೆ ನಿಜ. ನನ್ನ ತಾಯಿ ಮ್ಯಾನೇಜಿಂಗ್ ಪಾರ್ಟನರ್ ಇದ್ದಾರೆ. ಆ ಬಗ್ಗೆ ಪ್ರತಿವಾದ ಪತ್ರದಲ್ಲಿ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪಾಲುದಾರಿಕೆ ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ. ಈ ಪ್ರಕರಣದ ವಿವಾದದ ವಸ್ತುಗಳನ್ನು ಕಳುಹಿಸುವಾಗ ಅವುಗಳಿಗೆ ಜಖಂ ಆದುದ್ದನ್ನು ನಾನು ನೋಡಿಲ್ಲ. ಈಗ ನಾನು ನೋಡುತ್ತಿರುವ ನಿಪಿ3 ರ ಹಿಂಭಾಗದಲ್ಲಿರುವ ಸೀಲ್ ನಮ್ಮ ಸಂಸ್ಥೆಯದ್ದು ಇದೆ, ಆದರೆ ಅದರಲ್ಲಿರುವ ಬರವಣಿಗೆ ಹಾಗೂ ಸಹಿ ಯಾರದೆಂದು ಗೊತ್ತಿಲ್ಲ. ಅದನ್ನು ನಮ್ಮ ಸಂಸ್ಥೆಯ ಚಾಲಕರು ಬರೆದಿದ್ದಾರೆ ಎಂದರೆ ಇರಬಹುದು ಆದರೆ ಗೊತ್ತಿಲ್ಲ. ಆ ಬಗ್ಗೆ ನಾನು ನಮ್ಮ ಸಂಸ್ಥೆಯ ಚಾಲಕನ್ನು ವಿಚಾರಿಸಿಲ್ಲ. ಅದರಲ್ಲಿ ಸರಕನ್ನು ತೋಯ್ದು ಸ್ಥಿತಿಯಲ್ಲಿ ಪಡೆದಿದ್ದೇವೆ ಎಂದು ನಮೂದಿಸಿರುವುದು ಸರಿಯಿರಬಹುದು ಎಂದರೆ ಇರಬಹುದು. ಆ ಬರವಣಿಗೆ ಕೆಳಗಡೆ ನಮ್ಮ ಚಾಲಕರೇ ಸಹಿ ಮಾಡಿದ್ದಾರೆ ಮತ್ತು ನಾವು ಸಂಸ್ಥೆಯ ಸೀಲ್ ಹಾಕಿದ್ದೇವೆ ಎಂದರೆ ಸರಿಯಲ್ಲ. ನಿಪಿ4 ನೋಟಿಸಿಗೆ ನಾವು ಇ–ಮೇಲ್ ಮೂಲಕ ರಿಪ್ಲೈ ಕಳುಹಿಸಿದ್ದೇವೆ. ದಿನಾಂಕ 12.5.2023 ರಂದು ನಿಪಿ5 ರಂತೆ ಓಪನ್ ಡೆಲಿವರಿ ಸರ್ಟಿಫಿಕೆಟ್ ನೀಡಿದ್ದೇವೆ ಎಂದರೆ 2 ನೇ ವಾದಿಯ ವಿನಂತಿ ಮೇರೆಗೆ 2–3 ಆ ರೀತಿ ಓಪನ್ ಡೆಲಿವರಿ ಸರ್ಟಿಫಿಕೆಟ್ ನೀಡಿದ್ದೇವೆ. 2 ನೇ ವಾದಿ ವಿನಂತಿ ಮೇರೆಗೆ ಆ ರೀತಿ ಸರ್ಟಿಫಿಕೆಟ್ ನೀಡಿದ ಬಗ್ಗೆ ದಿನಾಂಕ 12.5.2023 ರ ನಂತರ ಯಾವತ್ತೂ ವಾದಿಗಳಿಗೆ ತಿಳಿಸಿಲ್ಲ ಎಂದರೆ ನಿಜ. ದಿನಾಂಕ 12.5.2023 ರಂದು ನಿಡಿ14 ರಂತೆ ಡ್ಯಾಮೇಜ್ ಸರ್ಟಿಫಿಕೆಟ್ ನೀಡಿದ್ದೇವೆ ಆ ರೀತಿ 2–3 ಸರ್ಟಿಫಿಕೆಟ್ ನೀಡಿದ್ದೇವೆ. ನಿಪಿ5 ಮತ್ತು 14 ನ್ನು ಒಂದೇ ದಿನ ನೀಡಿದ್ದೇವೆ ಎಂದರೆ ನಿಜ. ನಿಪಿ14 ರಲ್ಲಿ ಎಷ್ಟು ಸರಕುಗಳಿಗೆ ನಷ್ಟವಾಗಿದೆ ಎಂದು ಹೇಳಿದ್ದೇವೆ ಎಂದರೆ ನಿಜ. ನಿಪಿ14 ನ್ನು ಒತ್ತಾಯದಿಂದ ಪಡೆದ ಬಗ್ಗೆ

ಯಾವುದಾದರೂ ಪತ್ರ ಬರೆದಿದ್ದೀರಾ ಎಂದರೆ ಆ ಬಗ್ಗೆ ಇ-ಮೇಲ್ ಕಳುಹಿಸಿದ್ದೇವೆ. ನಿಪಿ8 ದಾಖಲೆಯಲ್ಲಿ ಇರುವ ಫೋಟೋದಲ್ಲಿ ಕಾಣುವ ಲಾರಿ ನಾವು ಈ ಪ್ರಕರಣದಲ್ಲಿ ವಿವಾದಿತ ಸರಕನ್ನು ಕಳುಹಿಸಿದ್ದ ಲಾರಿ ಎಂದರೆ ನಿಜ. ಸದರಿ ಫೋಟೋವನ್ನು ನಿಪಿ8 ಎ ಎಂದು ಗುರುತಿಸಿದೆ. ಈ ದಾವೆ ಹಾಕುವ ಮೊದಲು ವಾದಿ ಸಂಸ್ದೆಯವರು ನಿಪಿ12 ರಂತೆ ನೋಟಿಸ್ ಕಳುಹಿಸಿದ್ದಾರೆ ಎಂದರೆ ಇರಬಹುದು. ನಿಪಿ12 ಕ್ಕೆ ಪ್ರತಿವಾದಿ ಸಂಸ್ದೆ ರಿಪ್ಲೈ ಕಳುಹಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದಲ್ಲಿ ನಾವು ಕೇಳಿರುವ 2.10 ಲಕ್ಷ ರೂ.ಗಳನ್ನು 2 ನೇ ವಾದಿ ಅಥರ್ವ ಸಾಯಿ ಪ್ಲೆಕ್ಸಿಪ್ಯಾಕ್ ಸಂಸ್ದೆಯವರು ನಮಗೆ ಪಾವತಿಸಲು ಜವಬ್ದಾರರಿದ್ದಾರೆ. ಆ ಹಣವನ್ನು ಪಾವತಿಸುವಂತೆ ನೋಟಿಸ್ ಕಳುಹಿಸಿದ್ದೀರಾ ಎಂದರೆ ಇ-ಮೇಲ್ ಮೂಲಕ ಕಳುಹಿಸಿದ್ದೇವೆ. ಆ ಇ-ಮೇಲ್ ಪ್ರತಿಗಳನ್ನು ಹಾಜರುಪಡಿಸಿಲ್ಲ ಎಂದರೆ ನಿಜ. 2 ನೇ ವಾದಿ ವಿರುದ್ಧ ಪ್ರತ್ಯೇಕ ದಾವೆ ಹಾಕಲು ತೊಂದರೆ ಇರಲಿಲ್ಲ. ನಮ್ಮ ಜವಬ್ದಾರಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಒತ್ತಾಯದಿಂದ ದಾಖಲೆ ಪಡೆದಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಂಸ್ದೆ ಸರಕು ಸಾಗಣೆ ಮಾಡುವ ಕಾಲಕ್ಕೆ ಸರಿಯಾದ ಕ್ರಮಗಳನ್ನು ಕೈಗೊಳ್ಳದಿದ್ದರಿಂದ 2 ನೇ ವಾದಿಗೆ ಸೇರಿದ ಸರಕುಗಳಿಗೆ ಡ್ಯಾಮೇಜ್ ಆಗಿದೆ ಎಂದರೆ ಸರಿಯಲ್ಲ. ನಿಪಿ5 ದಾಖಲೆಯಲ್ಲಿ ಟಾರ್ಪಲಿನ್ ಸರಿಯಾಗಿ ಹಾಕದಿದ್ದಕ್ಕೆ ನೀರು ಒಳ ಹೋಗಿ ಸರಕಿಗೆ ಹಾನಿಯಾಗಿದೆ ಎಂದು ನಮೂದಾಗಿದೆ ಎಂದರೆ ಅದನ್ನು ಸಹ ಒತ್ತಾಯವಾಗಿ ಪಡೆದಿರುತ್ತಾರೆ. ನಿಪಿ14 ರಲ್ಲಿ ಸಹ ಟಾರ್ಪಲಿನ್ ಸರಿಯಾಗಿ ಹಾಕದಿದ್ದಕ್ಕೆ ಸರಕಿಗೆ ಹಾನಿಯಾಗಿದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸರಿಯಾಗಿ ಟಾರ್ಪಲಿನ್ ಹಾಕಿದ್ದರೆ ನೀರು ಒಳ ಹೋಗುವ ಸಾಧ್ಯತೆ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ 30 ವರ್ಷಗಳಿಂದ ಸರಕು ಸಾಗಣೆ ವ್ಯವಹಾರ ಮಾಡುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು